ಡಾ ॥ ಎಂ. ಪಿ. ಕರ್ಕಿ : ಬಿಲ್ಡಿಂಗ್ ಮಾಡುವುದಕ್ಕೆ ಕೆ.ಹೆಚ್.ಡಿ.ಪಿ.ಯಿಂದ ನೆರವು ದೊರಕುತ್ತದೆ ಹಾಗೂ ಕೇಂದ್ರ ಸರ್ಕಾರದಿಂದ ರಕ್ತನಿಧಿಗಾಗಿ ನೆರವು ದೊರಕುತ್ತದೆ. ಸರ್ಕಾರದವರು ಸ್ವಲ್ಪ ಹಣ ಹಾಕಬೇಕು ಎನ್ನತಕ್ಕಂಥ ನಿರ್ಧಾರವನ್ನು ಏಕೆ ಮಾಡಬಾರದು ?

ಡಾ ॥ ಹೆಚ್.ಸಿ. ಮಹಾದೇವಪ್ಪ : ನಾನು ಏನು ಹೇಳುತ್ತೇನೆ ಎನ್ನತ್ಕಂಥದ್ದು ಮಾನ್ಯ ಸದಸ್ಯರಿಗೆ ಗೊತ್ತಾಗಲಿಲ್ಲ ಎಂದರೆ ನಾನು ಯಾವ ರೀತಿ ಉತ್ತರ ಹೇಳಬೇಕು ಎಂಬುದು ಗೊತ್ತಾಗುತ್ತಿಲ್ಲ. ಜಿಲ್ಲಾ ಆಸ್ಪತ್ರೆಗಳನ್ನು ಹೆಚ್ಚು ಕಾನ್‌ಸೆಂಟ್ರೇಟ್ ಮಾಡುತ್ತಿದ್ದೇವೆ. ರಕ್ತನಿಧಿಗಾಗಿಯೇ ಜಿಲ್ಲಾ ಪಂಚಾಯಿತಿಗಳು ಒಂದು ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ.

Without consulting the Drugs Control Department ; There is Drugs and Cosmetics Act.

ಸುಪ್ರೀಂ ಕೋರ್ಟ್‌ನ ನಿರ್ದೇಶನ ಕೂಡ ಇದೆ. ಒಂದು ಬ್ಲಡ್ ಬ್ಯಾಂಕ್ ತೆರೆಯಬೇಕಾದರೆ 35ಲಕ್ಷ ರೂಪಾಯಿಗಳು ಖರ್ಚಾಗುತ್ತವೆ. ಒಂದು ಸಾವಿರ ಚದರ ಮೀಟರ್ ವ್ಯಾಸವುಳ್ಳ ರೂಮ್‌ಗಳಲ್ಲಿ ಮೂರು ವಿಭಾಗಗಳನ್ನು ಕಟ್ಟಬೇಕಾಗುತ್ತದೆ. ಈಗಾಗಲೇ ಕಾರವಾರದಲ್ಲಿ ಮಾಡಿದ್ದೇವೆ. ಹೊನ್ನಾವರಕ್ಕೆ ಕೊಡಬಾರದು ಎನ್ನುವ ಉದ್ದೇಶ ಇಲ್ಲ. ಆಕ್ಸಿಡೆಂಟ್ಸ್ ಆಗುತ್ತಿವೆ ಇದು ಮೇಜರ್ ಕಿಲ್ಲರ್ ಡಿಸೀಜ್;ನಾವು ಇಲ್ಲಿ ಬ್ಲಡ್‌ಬ್ಯಾಂಕ್ ಕೊಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ಎಲ್ಲೆಲ್ಲಿ ರಾಷ್ಟ್ರೀಯ ಹೆದ್ದಾರಿಗಳಿವೆಯೋ ಹಾಗೂ ಎಲ್ಲೆಲ್ಲಿ ಜಿಲ್ಲಾ ಆಸ್ಪತ್ರೆಗಳಿವೆಯೋ ಅಲ್ಲೆಲ್ಲಾ ಪ್ರಾಜೆಕ್ಟ್ ಮಾಡುವಂಥ ಸಂದರ್ಭದಲ್ಲಿ ಗುರುತಿಸಿದ್ದೇವೆ.

ಡಾ ॥ ಎಂ.ಪಿ. ಕರ್ಕಿ : ಸರ್ಕಾರಕ್ಕೆ ಹಣದ ಕೊರತೆ ಏನೂ ಕಾಣುವುದಿಲ್ಲ. ಇದಕ್ಕಾಗಿ ಕೆ.ಹೆಚ್.ಡಿ.ಪಿ.ಯಿಂದ ಬಿಲ್ಡಿಂಗ್ ಕಟ್ಟಲು ನೆರವು ದೊರೆಯುತ್ತದೆ.

ಅಧ್ಯಕ್ಷರು : ನಿಮ್ಮ ಸಲಹೆಯನ್ನು ಮಾನ್ಯ ಸಚಿವರು ಗಮನದಲ್ಲಿಟ್ಟುಕೊಂಡು ಸಂಪನ್ಮೂಲಗಳನ್ನು ನೋಡಿಕೊಂಡು ಮುಂದಿನ ಕ್ರಮ ತೆಗೆದುಕೊಳ್ಳುತ್ತಾರೆ.

ಸುರತ್ಕಲ್ ವಿಧಾನ ಸಭಾಕ್ಷೇತ್ರದಲ್ಲಿ ಶಾಲಾ ಮಕ್ಕಳಿಗೆ ಸಮವಸ್ತ್ರ ಹಾಗೂ ಪುಸ್ತಕಗಳನ್ನು ಒದಗಿಸುವುದು.

228(1598)

ಶ್ರೀ ಕುಂಬ್ಳೆ ಸುಂದರ್ ರಾವ್ (ಸುರತ್ಕಲ್) ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸುರತ್ಕಲ್ ವಿಧಾನ ಸಭಾ ಕ್ಷೇತ್ರದಲ್ಲಿ 1998-99ನೇ ಸಾಲಿನಲ್ಲಿ ಶಾಲಾ ಮಕ್ಕಳ ಪುಸ್ತಕ, ಲಕ್ಕಿ ಮತ್ತು ಸಮವಸ್ತ್ರಗಳಿಗೆ ನಿಗಧಿಪಡಿಸಿದ ಅನುದಾನದ ಮೊತ್ತವೆಷ್ಟು (ಪ್ರತ್ಯೇಕ ವಿವರ ಒದಗಿಸುವುದು)

ಆ) ಶಾಲಾ ಮಕ್ಕಳ ಸಮವಸ್ತ್ರ ಪುಸ್ತಕಗಳು ಸಕಾಲದಲ್ಲಿ ಒದಗುತ್ತಿಲ್ಲ ಎಂಬುದು ನಿಜವೇ ?

ಇ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಪ್ರೌಢ ಶಿಕ್ಷಣ ಸಚಿವರು)

ಅ) 1998-99ನೇ ಸಾಲಿನಲ್ಲಿ ಶಾಲಾ ಮಕ್ಕಳ ಪುಸ್ತಕ ಲಕ್ಕಿ ಮತ್ತು ಸಮವಸ್ತ್ರಕ್ಕೆಂದು ಯಾವುದೇ ಅನುದಾನವನ್ನು ಪ್ರತ್ಯೇಕವಾಗಿ ಸುರತ್ಕಲ್ ವಿಧಾನ ಸಭಾ ಕ್ಷೇತ್ರಕ್ಕೆ ಒದಗಿಸಿರಲಿಲ್ಲ. ಆದರೆ ಈ ಸದರಿ ಬಾಬ್ತುಗಳಿಗೆ ಮಾಡಿರುವ ವೆಚ್ಚ ಈ ಕೆಳಕಂಡಂತೆ ನೀಡಿದೆ :

ಪಠ್ಯ ಪುಸ್ತಕ : ರೂ. 1,24,324.00

ಸಮವಸ್ತ್ರ : ರೂ. 4,06,378.00

ಅಕ್ಕಿ : ಇದು ಕೇಂದ್ರ ಪ್ರಾಯೋಜಿತ ಕಾರ್ಯಕ್ರಮವಾಗಿದ್ದು ಯೋಜನೆಯಡಿ ಕೇಂದ್ರ ಸರ್ಕಾರವು ಪ್ರತಿ ವಿದ್ಯಾರ್ಥಿಗೆ ತಿಂಗಳಿಗೆ 3 ಕೆ.ಜಿ ಅಕ್ಕಿ,ಗೋಧಿಯನ್ನು ಉಚಿತವಾಗಿ ನೀಡುತ್ತಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಕುಂಬ್ಳೆ ಸುಂದರ್ ರಾವ್ :- ಅಧ್ಯಕ್ಷರೆ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ 1998-99ನೇ ಸಾಲಿನಲ್ಲಿ ಶಾಲಾ ಮಕ್ಕಳ ಪುಸ್ತಕ, ಅಕ್ಕಿ, ಸಮವಸ್ತ್ರಕ್ಕೆಂದು ನಿಗದಿಪಡಿಸಿದ ಅನುದಾನದ ಮೊತ್ತವೆಷ್ಟು ಎಂಬುದಕ್ಕೆ ಮಾಹಿತಿ ಕೊಟ್ಟಿರುತ್ತಾರೆ. ನನ್ನ ಮೂಲ ಪ್ರಶ್ನೆ ಏನೆಂದರೆ, ಶಾಲಾ ಮಕ್ಕಳ ಸಮವಸ್ತ್ರ ಪುಸ್ತಕಗಳು ಸಕಾಲದಲ್ಲಿ ಒದಗಿಸುತ್ತಿಲ್ಲ ಎಂಬುದು ನಿಜವೇ ಎಂದು ಕೇಳಿದ್ದಕ್ಕೆ ಇಂಥ ಸ್ಥಿತಿ ಇಲ್ಲ ಎನ್ನತಕ್ಕಂಥ ಉತ್ತರ ಕೊಟ್ಟಿದ್ದಾರೆ. ವಾಸ್ತವವಾಗಿ ಏನಾಗಿದೆ ಎಂದರೆ, ಜಿಲ್ಲಾ ಪಂಚಾಯಿತಿ ಸಭೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶಾಲಾ ಮಕ್ಕಳ ಪುಸ್ತಕ, ಸಮವಸ್ತ್ರ ಹಾಗೂ ಕೇಂದ್ರ ಸರ್ಕಾರದಿಂದ ಬರಬೇಕಾದ ಅಕ್ಕಿ ಕೂಡ ಸಕಾಲದಲ್ಲಿ ದೊರಕದೆ ಬಹಳ ತೊಂದರೆಯಾಗಿದೆ ಎಂದು ಸಾಕಷ್ಟು ಚರ್ಚೆಯಾಗಿದೆ. ನಾನು ಏನು ಹೇಳುತ್ತೇನೆಂದರೆ, ಕರ್ನಾಟಕದ ಯಾವುದೋ ಒಂದು ಜಿಲ್ಲೆಯಲ್ಲಿ ಎಲ್ಲಾ ಸರಿಯಾಗಿ ವಿತರಣೆಯಾಗುತ್ತದೆ ಎಂದು ತಾವು ಹೇಳುವುದಾದರೆ ಎಲ್ಲಾ ಕಡೆ ಇದು ಸರಿಯಾಗಿ ವಿತರಣೆಯಾಗುತ್ತದೆ ಎಂದು ಹೇಳತಕ್ಕಂಥದ್ದು ಸರಿಯಲ್ಲ. ಆದ್ದರಿಂದ, ದಕ್ಷಿಣ ಕನ್ನಡ ಜಿಲ್ಲೆಗೆ ಪ್ರತ್ಯೇಕವಾದ ಚಿಂತನೆ ಮಾಡಬೇಕಾಗಿದೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊರತೆ ಇರುವುದರಿಂದ ಸಕಾಲಕ್ಕೆ ಪುಸ್ತಕ, ಸಮವಸ್ತ್ರ, ಅಕ್ಕಿ, ವಿತರಣೆಯಾಗುವಂತೆ ಮಾನ್ಯ ಸಚಿವರು ಪ್ರಯತ್ನ ಮಾಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಅಧ್ಯಕ್ಷರೆ, ಮಾನ್ಯ ಸದಸ್ಯರು ಪುಸ್ತಕ, ಸಮವಸ್ತ್ರ, ಅಕ್ಕಿ ಸರಿಯಾಗಿ ವಿತರಣೆಯಾಗುತ್ತಿಲ್ಲ ಎಂದು ಹೇಳಿದ್ದಾರೆ. ಅಕ್ಕಿಯ ಕೊರತೆ ಬಗ್ಗೆ ಜಿಲ್ಲಾ ಮಟ್ಟದಲ್ಲಿ ರಿವ್ಯೂ ಮಾಡತಕ್ಕಂಥ ಸಂದರ್ಭದಲ್ಲಿ ಅನೇಕ ಸಾರಿ ಹೇಳಿದ್ದೇನೆ. ಪಠ್ಯಪುಸ್ತಕಗಳು ಮಾತ್ರ ಕಳೆದ ವರ್ಷ ಮತ್ತು ಈ ವರ್ಷ ಜೂನ್-ಎರಡರಂದು ರಾಜ್ಯಾದ್ಯಂತ ವಿತರಣೆ ಮಾಡಿದ್ದೇವೆ. ಬಹುಶ : ಈ ಕಾರ್ಯ ಪೂರ್ತಿ ಆಗದಿದ್ದರೂ ಶೇಕಡ 90ರಷ್ಟು ಆಗಿದೆ ಎನ್ನತಕ್ಕಂಥ ಮಾತನ್ನು ಹೇಳಬಯಸುತ್ತೇನೆ. ಮಾನ್ಯ ಸದಸ್ಯರು 1998-99ನೇ ಸಾಲಿನಲ್ಲಿ ಸಮವಸ್ತ್ರದ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಈ ಸಂದರ್ಭದಲ್ಲಿ ನಾವು ಬಟ್ಟೆಗಳನ್ನು ವಿತರಣೆ ಮಾಡತಕ್ಕಂಥದ್ದನ್ನು ಸ್ವಲ್ಪ ಬದಲಾವಣೆ ಮಾಡಿದೆವು. ಈ ಮೊದಲು ಆರ್ಡಿನರಿ ಬಟ್ಟೆಗಳನ್ನು ಕೊಡತಕ್ಕಂಥ ವ್ಯವಸ್ಥೆ ಇತ್ತು. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗಗಳಿಗೆ ಮಾತ್ರ ನಾವು ಆರ್ಡರ್‌ನ್ನು ಕೊಡುತ್ತಿದ್ದೆವು. ಬೇರೆ ಎಲ್ಲೂ ಕೊಡುತ್ತಿರಲಿಲ್ಲ. ಕಳೆದ ವರ್ಷ ಬಟ್ಟೆ ವಿತರಣೆ ಮಾಡುವುದರಲ್ಲಿ ಸ್ವಲ್ಪ ತಡವಾಗಿದೆ. ಇಂಥ ಸಂದರ್ಭದಲ್ಲಿ ನಾನು ಅವರನ್ನು ಕರೆದು, ಜಾಗ್ರತೆ ಕೊಡಬೇಕು ಎಂದು ನಿರ್ದೇಶನ ಕೊಟ್ಟ ತಕ್ಷಣ ಸಕಾಲದಲ್ಲಿ ಅವರು ಬಟ್ಟೆಗಳನ್ನು ಕೊಟ್ಟಿದ್ದಾರೆ. ಸಂಪೂರ್ಣವಾಗಿ ಎಲ್ಲಾ ಮಕ್ಕಳಿಗೂ ಸಕಾಲದಲ್ಲಿ ಬಟ್ಟೆಗಳನ್ನು ಒದಗಿಸಲು ಆಗದಿದ್ದರೂ ಸಹ ತಡವಾಗಿಯಾದರೂ ಬಟ್ಟೆಗಳನ್ನು ಒದಗಿಸುವಂಥ ಕಾರ್ಯ ಕಳೆದ ವರ್ಷ ನಡೆದಿದೆ. ಇನ್ನು ಅಕ್ಕಿ ವಿಚಾರವಾಗಿ ಹೇಳುವುದಾದರೆ, ಕೇಂದ್ರ ಸರ್ಕಾರದಿಂದ

ಅಕ್ಕಿ ಬರಬೇಕು, ಅಲ್ಲಿಂದ ಬರುವಾಗ ಎರಡು ತಿಂಗಳು ತಡವಾಯಿತು. ಆಗ ನಾವು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಾದ ಮೇಲೆ ಅಕ್ಕಿ ವಿತರಣೆ ಸರಿಯಾಯಿತು. ಈಗ ಅಕ್ಕಿಯನ್ನು ಎಲ್ಲಾ ಕಡೆ ಕೊಟ್ಟಿದ್ದೇವೆ. ನಾನು ಹಳ್ಳಿಗಳಲ್ಲಿ ಹೋದಾಗ ಅಕ್ಕಿ ಸರಿಯಾಗಿ ವಿತರಣೆಯಾಗುತ್ತಿದೆಯೇ ಎಂದು ವಿಚಾರಿಸುತ್ತೇನೆ. ಅಕ್ಕಿ ಸರಿಯಾಗಿ ವಿತರಣೆಯಾಗಿಲ್ಲ ಎಂದರೆ ಜನಪ್ರತಿನಿಧಿಗಳಾದ ಶಾಸಕರಿಂದ ಹಿಡಿದು ಗ್ರಾಮ ಪಂಚಾಯಿತಿ ಸದಸ್ಯರು ಕೂಡ ಉಪಾಧ್ಯಾಯರನ್ನು ಏಕೆ ತಡವಾಯಿತು ಎಂದು ಕೇಳಬಹುದು. ಇತ್ತೀಚಿಗೆ ಸ್ವಲ್ಪ ಹೆಚ್ಚು ಕಡಿಮೆ ಅಕ್ಕಿ ವಿತರಣೆ ಎಲ್ಲಾ ಕಡೆ ಸರಿಯಾಗಿ ನಡೆದಿದೆ ಎಂದು ನಾನಾದರೂ ಹೇಳಬಯಸುತ್ತೇನೆ.

ಶ್ರೀ ಡಿ.ವಿ.ಸದಾನಂದ ಗೌಡ : ಮಾನ್ಯ ಸಚಿವರು ಅಕ್ಕಿ ವಿತರಣೆಯನ್ನು ಉಪಾಧ್ಯಾಯರು ಸರಿಯಾಗಿ ಮಾಡಬೇಕು ಎಂದು ಹೇಳಿದರು. ಆದರೆ ಉಪಾಧ್ಯಾಯರು ಅಕ್ಕಿಯನ್ನು ವಿತರಣೆ ಮಾಡುವುದಿಲ್ಲ. ಸಹಕಾರಿ ಸಂಘಗಳ ಮೂಲಕ ಅಕ್ಕಿಯನ್ನು ವಿತರಣೆ ಮಾಡಬೇಕೇ ಹೊರತು ಉಪಾಧ್ಯಾಯರಿಗೆ ಇದರ ಜವಾಬ್ದಾರಿ ಬರುವುದಿಲ್ಲ. ಒಂದು ಪಕ್ಷ ಉಪಾಧ್ಯಾಯರನ್ನು ಕೇಳಿದರೆ ಮಕ್ಕಳೇ ಅಕ್ಕಿಯನ್ನು ತೆಗೆದುಕೊಂಡು ಹೋಗಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಇದಕ್ಕಾಗಿ ಡಿ.ಡಿ.ಪಿ.ಐ. ಅವರಿಂದಾಗಲಿ ಸೂಪರ್‌ವಿಷನ್ ಮಾಡಬೇಕಾಗಿದೆ. ಸೂಪರ್‌ವಿಷನ್ ಮಾಡಬೇಕಾದಂಥ ಅವಶ್ಯಕತೆ ಇದೆ. ಏಕೆಂದರೆ, ಉಪಾಧ್ಯಾಯರನ್ನು ಕೇಳುವುದಕ್ಕೆ ಬದಲು ಇದಕ್ಕೆ ಪ್ರತ್ಯೇಕವಾದ ವ್ಯವಸ್ಥೆ ಮಾಡಬೇಕು. ನ್ಯಾಯ ಬೆಲೆ ಅಂಗಡಿಗಳ ಮುಖಾಂತರ ಅಕ್ಕಿಯನ್ನು ತೆಗೆದು ಕೊಳ್ಳತಕ್ಕಂಥ ವ್ಯವಸ್ಥೆ ಬಹಳ ಕಷ್ಟ ಇದೆ. ಏಕೆಂದರೆ ಅಲ್ಲಿಗೆ ಅಕ್ಕಿ ತಡವಾಗಿ ಬರುವುದು, ಉದ್ದವಾದ ಕ್ಯೂನಲ್ಲಿ ನಿಲ್ಲುವುದು, ಇವು ಎಲ್ಲಾ ಬಹಳ ಕಷ್ಟದ ಕೆಲಸ. ಆದ್ದರಿಂದ ಇದಕ್ಕೊಂದು ಪ್ರತ್ಯೇಕವಾದ ವ್ಯವಸ್ಥೆ ಮಾಡಬೇಕಾಗಿದೆ.

ಅಧ್ಯಕ್ಷರು : ಸೂಪರ್‌ವಿಷನ್ ಮಾಡುವುದರ ಜೊತೆಗೆ ಅವರ ಮೇಲೆ ಕೂಡ ಸೂಪರ್‌ವಿಷನ್ ಮಾಡುವಂತಹ ವ್ಯವಸ್ಥೆಯಾಗಬೇಕು.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಅಕ್ಕಿ ವಿತರಣೆ ಬಗ್ಗೆ ಹೇಳುವುದಾದರೆ ಡೆಪ್ಯೂಟಿ ಕಮೀಷನರ್‌ರವರು ಅಕ್ಕಿಯನ್ನು ನಮಗೆ ಕೊಡುತ್ತಾರೆ. ನಾವು ಅವುಗಳನ್ನು ನ್ಯಾಯಬೆಲೆ ಅಂಗಡಿ ಹಾಗೂ ವಿ.ಎಸ್.ಎಸ್.ಎನ್. ಸೊಸೈಟಿಗಳ ಮೂಲಕ ಹಳ್ಳಿಗಳಲ್ಲಿ ವಿತರಣೆ ಮಾಡುತ್ತೇವೆ. ಅಕ್ಕಿ ಸಕಾಲಕ್ಕೆ ಬರಲಿಲ್ಲವೆಂದರೆ ಸಂಬಂಧ ಪಟ್ಟವರಿಗೆ ಹೇಳತಕ್ಕಂಥ ಸಂಪೂರ್ಣ ಜವಾಬ್ದಾರಿ ಉಪಾಧ್ಯಾಯರಿಗಿದೆ. ನಮ್ಮ ಇಲಾಖೆಯ ಜವಾಬ್ದಾರಿಯ ಜೊತೆಯಲ್ಲಿ ಜನಪ್ರತಿನಿಧಿಗಳಾದ ಶಾಸಕರಿಂದ ಹಿಡಿದು ಗ್ರಾಮ ಪಂಚಾಯಿತಿಯ ಸದಸ್ಯರು ಕೇಳತಕ್ಕಂಥ ಜವಾಬ್ದಾರಿ ಇದೆ.

ಶ್ರೀ ಕುಂಬೈ ಸುಂದರರಾವ್ : ಮೂರು ತಿಂಗಳಗಟ್ಟಲೆ ಅಕ್ಕಿ ಬರುವುದು ತಡವಾದರೆ ಫಲಾನುಭವಿಗಳು ಅದನ್ನು ಮರೆತು ಬಿಡುತ್ತಾರೆ. ಆಗ ಏನಾಗುತ್ತದೆಂದರೆ ಕೇಂದ್ರದ ಯೋಜನೆ ವ್ಯರ್ಥವಾಗುತ್ತದೆ.

ಧಾರವಾಡದ ಶಿಕ್ಷಕಿಯರ ತರಬೇತಿ ಸಂಸ್ಥೆ ಕಟ್ಟಡ ರಿಪೇರಿ

229 (1524)

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) :

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿರುವ ಶಿಕ್ಷಕಿಯರ ತರಬೇತಿ ಸಂಸ್ಥೆಗಳ ಒಟ್ಟು ಸಂಖ್ಯೆ ಎಷ್ಟು ? ಧಾರವಾಡಲ್ಲಿರುವ